# ಕಳಚೆ ಕಲ್ಲುಗಳು

ಇಲ್ಲಿರುವ ಭಾರಿ ಕಲ್ಲುಗಳನ್ನು ಎತ್ತರೆತ್ತರಕ್ಕೆ ಜೋಡಿಸಿದ್ದಾದರೂ ಯಾರು? ಇಂತಹದ್ದೊಂದು ನೈಸರ್ಗಿಕ ದೃಶ್ಯ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಕಳಚೆಯಲ್ಲಿವೆ. ದೇಶ ವಿದೇಶದ ಗಮನ ಸೆಳೆದಿರುವ ಯಾಣದ ಮಾದರಿಯಲ್ಲಿ ಇಲ್ಲಿ ಶಿಲೆಗಳು ರೂಪಿತವಾಗಿದ್ದು ಈ ಪ್ರಕೃತಿಯ ವಿಸ್ಮಯ ಪ್ರವಾಸಿಗರನ್ನು ಸೆಳೆಯುವಂತಿದೆ. ನಿಸರ್ಗ ರಮಣೀಯವಾದ ಕಳಚೆ ಊರು ಬೆಟ್ಟಗುಡ್ಡಗಳಿಂದ ಆವೃತವಾದ ಪ್ರದೇಶ. ಯಲ್ಲಾಪುರದಿಂದ 30ಕಿಮೀ ದೂರದಲ್ಲಿದೆ. ರಾಷ್ಟ್ರೀಯ ಹೆದ್ದಾರಿ 63ರಲ್ಲಿ 10 ಕಿಮೀ ದೂರದ ಚಿನ್ನಾಪುರದವರೆಗೆ ಸಾಗಬೇಕು. ಅಲ್ಲಿಂದ ಕೈಗಾ ರಸ್ತೆಯಲ್ಲಿ ತೇಲಂಗಾರ, ವಜ್ರಳ್ಳಿ ಮೂಲಕ ಮುನ್ನಡೆದರೆ ತಳಕೆಬೈಲ್ ಕ್ರಾಸ್ ಸಿಗುತ್ತದೆ. ಅಲ್ಲಿ ಬಲಕ್ಕೆ ತಿರುಗಿ ಪಯಣ ಕೈಗೊಂಡರೆ ಕಳಚೆ ಕಾಣುತ್ತದೆ. ಇದೇ ಮಾರ್ಗದಲ್ಲಿ ಕೈಗಾ, ಕಾರವಾರ ಕಡೆಯಿಂದಲೂ ಇಲ್ಲಿಗೆ ಬರಬಹುದು. ತೀವ್ರ ಇಕ್ಕಟ್ಟು ಹೆಚ್ಚು ತಿರುವುಗಳಿರುವ ಈ ಮಾರ್ಗದಲ್ಲಿ ಸಾಗುವುದೆಂದರೆ ಒಂದು ಸಾಹಸ.

ದಟ್ಟವಾದ ಕಾಡಿನ ನಡುವೆ ಆರಂಭದಲ್ಲಿ ಕಾಣಸಿಗುವುದು ನೂರಾರು ಅಡಿ ಎತ್ತರದ ಏಕಶಿಲೆ. ಇದನ್ನು ಕಳಚೆಕಲ್ಲು, ದೇವಿಕಲ್ಲು ಎಂಬ ಹೆಸರಿನಲ್ಲಿ ಕರೆಯುತ್ತಾರೆ. ಇದನ್ನು ಎತ್ತರದಿಂದ ನೋಡಲು ವೀಕ್ಷಣಾ ಗೋಪುರ ಸಹ ಇದೆ. ನಿಸರ್ಗದ ಸೊಬಗಿಗೆ ಸಾಕ್ಷಿಯಾಗಿರುವ ಈ ಪ್ರದೇಶದಲ್ಲಿ ಕೊಡಸಳ್ಳಿಯಲ್ಲಿ ಕಾಳಿ ನದಿಗೆ ಹಾಕಿರುವ ಅಣೆಕಟ್ಟಿನ ಹಿನ್ನೀರಿನ ಸೊಬಗನ್ನು ಸವಿಯಬಹುದು. ಇವೆಲ್ಲವನ್ನು ವೀಕ್ಷಿಸಿ ಅನತಿ ದೂರ ಸಾಗಿದರೆ ಅಡಕೆ ತೋಟಗಳ ಅಂಚಿನಲ್ಲಿ ಸಾಲುಸಾಲಾಗಿ ಧರೆಗೆ ಕಲ್ಲುಗಳ ರಾಶಿ ಹರಡಿಕೊಂಡಿರುವುದು ನೋಡುಗರನ್ನು ಬೆರಗುಗೊಳಿಸುತ್ತದೆ.

**ಚಿತ್ರಬರಹ: ಆಶಾ ಕೆರೆಗದ್ದೆ, ಶಿರಸಿ**





# ನಿಗೂಢ ವಾಸ್ತುಶಿಲ್ಪಿಯ ಕೈಚಳಕ

ನಮ್ಮೂರಿನ ಹಳೆಯ ಮನೆಯ ಗೋಡೆಯನ್ನು ಕೆಡವಿದಾಗ ಆ ಗೋಡೆಯೊಳಗೆ ಈ ಅದ್ಭುತ ರಚನೆ ನಿರ್ಮಾಣವಾಗಿದ್ದು ಕಂಡು ಬಂತು. ಆ ಗೋಡೆಯೊಳಗಿನ ಮಣ್ಣಿನಿಂದಲೇ ನಿರ್ಮಿಸಲ್ಪಟ್ಟ ಈ ವಾಸ್ತುರಚನೆಯ ಕಲಾತ್ಮಕತೆ ಮೆಚ್ಚಲೇಬೇಕು. ಪ್ರಕೃತಿ ನಿರ್ಮಿತ ಗುಹೆಯ ಮಿನಿಯೇಚರ್ ಇದ್ದಂತೆ ಕಾಣುವ ಈ ರಚನೆಯ ವಾಸ್ತುಶಿಲ್ಪಿಯ ಕೈಚಳಕ ವಿಸ್ಮಯವಲ್ಲವೇ?

**- ಬಿ.ಎಸ್. ಅರಸ, ಉಡುಪಿ**

# ಮೊಬೈಲ್ ಗೋಪುರ

ತಾಳೆ ಮರದಂತೆ ಕಂಡರೂ ಚಿತ್ರದಲ್ಲಿರುವುದು ಮೊಬೈಲ್ ಫೋನ್ ಟವರ್ ಅಂದರೆ ಅಚ್ಚರಿಯಾಗಬಹುದಲ್ಲವೇ? ರಿಲಯನ್ಸ್ ಜಿಯೋ ಸಂಸ್ಥೆ ಮಣಿಪಾಲದ ಎಮ್ಐಟಿ ಕ್ಯಾಂಪಸ್ ಬಳಿ ನಿರ್ಮಿಸಿರುವ ಈ ಟವರ್ ಜನಮನ ಸೂರೆಗೊಳ್ಳುತ್ತಿದೆ.

**-ಪಿ.ಜಯವಂತ ಪೈ, ಕುಂದಾಪುರ**

